ಸೃಜನಿ

**SRUJANI: Indian Journal of Innovative Research and Development (SIJIRD)**
Volume-3 Issue 2, May-June 2024, Pp. 1-9
Bi-Monthly, Peer-Reviewed, Open Access, Indexed Journal

**I S S N: 2583-3510**
**S I R D F**
**J O U R N A L S**
editor@srujani.in
www.srujani.in

# ಭಾರತೀಯ ಫೆಡರಲಿಸಂ ವ್ಯವಸ್ಥೆಯ ವಿರುದ್ಧ "ಒಂದು ರಾಷ್ಟ್ರ ಒಂದು ಚುನಾವಣೆ"

**ಧರ್ಮರಾಯ[1] ಮತ್ತು ದಯಾನಂದ ನಾಯ್ಕ್[2]**
[1]ಸಂಶೋಧನಾ ವಿದ್ಯಾರ್ಥಿ, [2]ಸಹಾಯಕ ಪ್ರಾಧ್ಯಾಪಕರು
ರಾಜ್ಯಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಮಂಗಳೂರು.

**Abstract:**
*ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸುವ ವಿಚಾರವಾಗಿ ಬಹಳ ದಿನಗಳಿಂದ ಚರ್ಚೆ ನಡೆಯುತ್ತಲೇ ಇದೆ. "ಒಂದು ರಾಷ್ಟ್ರ ಒಂದು ಚುನಾವಣೆ" ಇಂಥಹ ವ್ಯವಸ್ಥೆ ಈಗಾಗಲೇ ಅಮೇರಿಕಾ, ಯುಕೆ, ಇಂಡೋನೇಷ್ಯಾ, ದಕ್ಷಿಣ ಆಫ್ರಿಕಾ, ಬೆಲ್ಜಿಯಂ, ಇಟಲಿ ದೇಶಗಳಲ್ಲಿ ಜಾರಿಯಲ್ಲಿದೆ. ಪ್ರಜಾಪ್ರಭುತ್ವದ ಬಹುಮುಖ್ಯ ಅಂಗವೇ ಚುನಾವಣೆ. ಭಾರತೀಯ ಆಡಳಿತ ವ್ಯವಸ್ಥೆಯಲ್ಲಿ 1952 ರಿಂದ 1967ರ ಅವಧಿಯಲ್ಲಿ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳು ಏಕಕಾಲದಲ್ಲಿ ನಡೆದವು. ಇದರ ನಂತರ, ಅಸ್ಥಿರ ಸರ್ಕಾರಗಳ ಅವಧಿ ಪ್ರಾರಂಭವಾಯಿತು. ಇದರ ಪರಿಣಾಮವಾಗಿ ಚುನಾವಣೆಗಳ ಸಮಯದಲ್ಲಿ ಅಕ್ರಮಗಳು ಸಂಭವಿಸಿದವು. ಈಗಿನ ಪ್ರಧಾನಿ ಕೂಡ ಈ ವಿಚಾರವನ್ನು ಬೆಂಬಲಿಸಿ ಮುಂದಕ್ಕೆ ಕೊಂಡೊಯ್ದಿದ್ದಾರೆ. ಒಂದು ರಾಷ್ಟ್ರ ಒಂದು ಚುನಾವಣೆಗೆ ಯಾವುದೇ ನಿರ್ದಿಷ್ಟ ಅರ್ಥವಿದೆ ಎಂದು ಪರಿಗಣಿಸಲಾಗಿಲ್ಲ ಅಂದರೆ ಯಾವುದೇ ಮಾನದಂಡವನ್ನು ನಿಗದಿಪಡಿಸಲಾಗಿಲ್ಲ. ಸರ್ಕಾರದ ಉದ್ದೇಶದ ಪ್ರಕಾರ, ಒಂದು ರಾಷ್ಟ್ರ ಒಂದು ಚುನಾವಣೆಯಲ್ಲಿ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳನ್ನು ಮಾತ್ರ ಸೇರಿಸಲಾಗಿದೆ. ಆದರೆ ಭಾರತೀಯ ಸಂವಿಧಾನದಲ್ಲಿ ಸಾರ್ವಜನಿಕರು ನೇರವಾಗಿ ಮೂರು ರೀತಿಯ ಚುನಾವಣೆಗಳಲ್ಲಿ ಭಾಗವಹಿಸುತ್ತಾರೆ. ಇದರಲ್ಲಿ ಸ್ಥಳೀಯ ಸರ್ಕಾರದ ಚುನಾವಣೆಗಳನ್ನು ಏಕಕಾಲಕ್ಕೆ ನಡೆಸಬೇಕು. ಏಕೆಂದರೆ ಮೂರು ರೀತಿಯ ಚುನಾವಣೆಗಳ ಅವಧಿ ಐದು ವರ್ಷಕ್ಕೆ ಮಾತ್ರ ನಿಗದಿಯಾಗಿದೆ ಎಂದು ಕೆಲವು ವಿದ್ವಾಂಸರು ಸೂಚಿಸಿದ್ದಾರೆ. ಪ್ರಸ್ತುತ ಈ ಲೇಖನವು ಏಕಕಾಲಿಕ ಚುನಾವಣೆಗಳ ಪರವಾಗಿ ಮತ್ತು ವಿರುದ್ಧವಾಗಿ ವಾದಗಳನ್ನು ವಿಶ್ಲೇಷಿಸುತ್ತದೆ. ಇದರಲ್ಲಿ ಕೆಲವು ವಿದ್ವಾಂಸರು ಇದಕ್ಕೆ ವಿರುದ್ಧವಾಗಿ ಫೆಡರಲಿಸಂನ ರಚನೆಯ ನಾಶದ ಬಗ್ಗೆ ಮಾತನಾಡುತ್ತಾರೆ, ಆದರೆ ಕೆಲವರು ಏಕಕಾಲಿಕ ಚುನಾವಣೆಗಳನ್ನು ಬೆಂಬಲಿಸುತ್ತಾರೆ.*

**Keywords:** *ಫೆಡರಲಿಸಂ, ಚುನಾವಣೆ, ಕೇಂದ್ರ–ರಾಜ್ಯ ಸಂಬಂಧಗಳು, ಚುನಾವಣಾ ಆಯೋಗ, ಕಾನೂನು ಆಯೋಗ, ಒಂದು ರಾಷ್ಟ್ರ ಒಂದು ಚುನಾವಣೆ.*

## ಪೀಠಿಕೆ

"ಒಂದು ರಾಷ್ಟ್ರ ಒಂದು ಚುನಾವಣೆ" ಬಗ್ಗೆ ಪ್ರಸ್ತುತ ನಡೆಯುತ್ತಿರುವ ಚರ್ಚೆಗೆ ಮೂಲಕಾರಣ ರಾಜಕಾರಣದಲ್ಲಿ ಆಳವಾಗಿ ಬೇರುಬಿಟ್ಟಿರುವ ಚುನಾವಣಾ ಭ್ರಷ್ಟಾಚಾರ ಮತ್ತು ರಾಜಕೀಯ ಸ್ವಹಿತಾಸಕ್ತಿಗಳು. ಪ್ರಸ್ತುತ ವಿಶ್ವದಲ್ಲಿ ಅಸ್ತಿತ್ವದಲ್ಲಿರುವ 192 ರಾಷ್ಟ್ರಗಳ ಪೈಕಿ 120 ರಾಷ್ಟ್ರಗಳು ಚುನಾವಣಾ

***Please cite this article as:*** ಧರ್ಮರಾಯ ಮತ್ತು ದಯಾನಂದ ನಾಯ್ಕ್. (2024). ಭಾರತೀಯ ಫೆಡರಲಿಸಂ ವ್ಯವಸ್ಥೆಯ ವಿರುದ್ಧ "ಒಂದು ರಾಷ್ಟ್ರ ಒಂದು ಚುನಾವಣೆ". *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(2), 1–9

ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡಿದ್ದು, ಈ ಪ್ರಮಾಣ ಜಗತ್ತಿನ ಜನಸಂಖ್ಯೆಯ ಶೇ.58.2 ರಷ್ಟಿದೆ ಎಂಬುದನ್ನು ಗಮನಿಸಬಹುದು. ಏಕೆಂದರೆ ಆಗಲೇ ಅರ್ಥವಾಗುವುದು ಚುನಾವಣಾ ರಾಜಕಾರಣದಲ್ಲಿ ಹೆಮ್ಮರವಾಗಿ ವ್ಯಾಪಿಸಿರುವ ಭ್ರಷ್ಟಾಚಾರದ ಮೂಲಬೇರುಗಳು ಇಡೀ ರಾಜಕೀಯ ವ್ಯವಸ್ಥೆಯನ್ನು ಎಷ್ಟರಮಟ್ಟಿಗೆ ಹಾಳು ಮಾಡಿತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳಬಹುದು. ಈ ಹಿನ್ನೆಲೆಯಲ್ಲಿ "ಒಂದು ರಾಷ್ಟ್ರ ಒಂದು ಚುನಾವಣೆ" ಸದ್ಯದ ಮಟ್ಟಿಗೆ ನಮ್ಮ ಮುಂದಿರುವ ಆಯ್ಕೆನಾ? ಅಥವಾ ಇದರ ಸಾಧ್ಯಾಸಾಧ್ಯತೆ ಮತ್ತು ಪರಿಣಾಮದ ಕುರಿತಂತೆ ಒಂದಷ್ಟು ಸವಾಲುಗಳೂ ಕೂಡ ಇವೆ. ಇವುಗಳಿಗೆ ಸೂಕ್ತ ಪರಿಹಾರೋಪಾಯಗಳನ್ನು ಕಂಡುಕೊಳ್ಳಬಹುದಾದ ದಾರಿ ಯಾವುದು? ಎಂಬುದರ ನೆಲೆಯಲ್ಲಿ ಈ ಲೇಖನವನ್ನು ಚರ್ಚಿಸಲಾಗಿದೆ.

"ಒಂದು ರಾಷ್ಟ್ರ ಒಂದು ಚುನಾವಣೆ" ಎಂಬ ಪ್ರಸ್ತಾಪ ಇಂದಿನ ವಿದ್ಯಮಾನವಲ್ಲ, 1982–83 ರಲ್ಲಿ ಚುನಾವಣಾ ಆಯೋಗ ಏಕಕಾಲಕ್ಕೆ ಚುನಾವಣೆ ನಡೆಸುವ ಸಲಹೆಯನ್ನು ಮಂಡಿಸಿತ್ತು. ಇದಾದ ನಂತರ ಮುಖ್ಯವಾಗಿ ಕಾನೂನು ಆಯೋಗದ ವರದಿಯನ್ನು 1999 ರಲ್ಲಿ ನ್ಯಾಯಮೂರ್ತಿ ಬಿ.ಪಿ. ಜೀವನರೆಡ್ಡಿ ಮಂಡಿಸಿದರು. ಇದರಲ್ಲಿ ಏಕಕಾಲಕ್ಕೆ ಚುನಾವಣೆ ನಡೆಸಲು ಕಾನೂನು ಆಯೋಗ ಶಿಫಾರಸು ಮಾಡಿದೆ. 2003ರಲ್ಲಿ ಪ್ರಧಾನಿ ವಾಜಪೇಯಿ ಹಾಗೂ 2010ರಲ್ಲಿ ಭಾ.ಜ.ಪ. ದ ಹಿರಿಯ ನಾಯಕ ಲಾಲ್ ಕೃಷ್ಣ ಅಡ್ವಾಣಿ ಅವರು ಪ್ರಸ್ತಾವನೆಯನ್ನು ಜಾರಿಗೆ ತರಲು ಶಿಫಾರಸು ಮಾಡಿದರು. 2015 ರಲ್ಲಿ ಸಂಸದೀಯ ಸ್ಥಾಯಿ ಸಮಿತಿ ಇದೇ ರೀತಿಯ ಸಲಹೆಯನ್ನು ನೀಡಿತು. ಇದರ ನಂತರ, 2018ರಲ್ಲಿ ನ್ಯಾಯಮೂರ್ತಿ ಬಿ.ಎಸ್. ಚೌಹಾಣ್ ನೇತೃತ್ವದ ಸಮಿತಿಯ ಕರಡು ವರದಿಯಲ್ಲಿಯೂ ಏಕಕಾಲದ ಚುನಾವಣೆಗೆ ಶಿಫಾರಸು ಮಾಡಿದ್ದರೂ, ಸಂವಿಧಾನದ ವಿಧಿ 83(2), 85(2)(ಬಿ), 172(1), 174(2)(ಬಿ) ಮತ್ತು 356ರ ವಿಧಿ ತಿದ್ದುಪಡಿ ಮಾಡದೆ ಹಾಗೂ ತಿದ್ದುಪಡಿಯನ್ನು ಶೇ.50ರಷ್ಟು ರಾಜ್ಯಗಳು ಮಾನ್ಯ ಮಾಡದೆ ಇದು ಸಾಧ್ಯವಾಗುವುದಿಲ್ಲ ಎಂಬ ಅಂಶವನ್ನು ಸ್ಪಷ್ಟಪಡಿಸಿತ್ತು. ಇದಲ್ಲದೇ, 2014 ಮತ್ತು 2019ರ ಲೋಕಸಭೆ ಚುನಾವಣೆಯಲ್ಲಿ ಬಿ.ಜೆ.ಪಿ ತಮ್ಮ ಪ್ರಣಾಳಿಕೆಯಲ್ಲಿ ಒಂದು ರಾಷ್ಟ್ರ ಒಂದು ಚುನಾವಣೆ ಎಂದು ಘೋಷಿಸಿದರು. ಪ್ರಸ್ತುತ ಜೂನ್ 2019ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಈ ಸಲಹೆಯನ್ನು ಪುನರುಚ್ಚರಿಸಿದರು ಮತ್ತು ಚುನಾವಣಾ ಆಯೋಗವು ಏಕಕಾಲದಲ್ಲಿ ಚುನಾವಣೆ ನಡೆಸುವಲ್ಲಿ ತನ್ನ ಬೆಂಬಲವನ್ನು ವ್ಯಕ್ತಪಡಿಸಿತು. ಈ ಸಲಹೆಯನ್ನು ತಳಮಟ್ಟದಲ್ಲಿ ಕಾರ್ಯಗತಗೊಳಿಸಲು, ಜೂನ್ 2019 ರಲ್ಲಿ ಸರ್ವಪಕ್ಷ ಸಭೆಯನ್ನು ಸಹ ಆಯೋಜಿಸಲಾಗಿತ್ತು ಮತ್ತು 26 ನವೆಂಬರ್ 2020 ರಂದು ನಡೆದ ಅಖಿಲ ಭಾರತ ಅಧ್ಯಕ್ಷರ 80ನೇ ಸಭೆಯಲ್ಲಿ ಈ ವಿಷಯವು ಕೇಂದ್ರಬಿಂದುವಾಗಿತ್ತು. ಒಂದು ರಾಷ್ಟ್ರ ಒಂದು ಚುನಾವಣೆ ಕುರಿತು ಭಾರತಾದ್ಯಂತ ಜಾಗೃತಿ ಮೂಡಿಸಲು ಬಿ.ಜೆ.ಪಿ. 25 ವೆಬಿನಾರ್‌ಗಳನ್ನು ಸಹ ಆಯೋಜಿಸಲಾಗುತ್ತಿದೆ. ಇದರೊಂದಿಗೆ ಕೆಲವು ರಾಜಕೀಯ ಪಕ್ಷಗಳು ಈ ವಿಚಾರವನ್ನು ಒಪ್ಪಿಕೊಂಡಿವೆ. ಆದರೆ ಬಹುತೇಕ ರಾಜಕೀಯ ಪಕ್ಷಗಳು ವಿರೋಧ ವ್ಯಕ್ತಪಡಿಸಿವೆ. ಈ ವಿಚಾರ ಪ್ರಜಾಸತ್ತಾತ್ಮಕ ಪ್ರಕ್ರಿಯೆಗೆ ವಿರುದ್ಧವಾದುದು ಎಂಬುದು ಅವರ ಅಭಿಪ್ರಾಯ. ನಿಸ್ಸಂಶಯವಾಗಿ, ಈ ಕಲ್ಪನೆಯ ಬಗ್ಗೆ ಒಮ್ಮತವಿಲ್ಲದಿದ್ದರೆ ಅದನ್ನು ಕಾರ್ಯಗತಗೊಳಿಸಲು ಸಾಧ್ಯವಾಗುವುದಿಲ್ಲ.

**ಒಂದು ರಾಷ್ಟ್ರ ಒಂದು ಚುನಾವಣೆ ಏಕೆ ಬೇಕು?**

ಜಗತ್ತಿನ ಯಾವುದೇ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಚುನಾವಣೆಗಳು ಎಂಬುದು ಅತ್ಯಗತ್ಯವಾದ ಪ್ರಕ್ರಿಯೆಯಾಗಿದೆ. ಆರೋಗ್ಯಕರ ಮತ್ತು ನ್ಯಾಯಸಮ್ಮತವಾದ ಚುನಾವಣೆಗಳು ಪ್ರಜಾಪ್ರಭುತ್ವಕ್ಕೆ ಅತ್ಯಗತ್ಯ. ಇದು ಭಾರತದಂತಹ ಬೃಹತ್ ದೇಶದಲ್ಲಿ ಅಡೆತಡೆಯಿಲ್ಲದ ಮತ್ತು ನ್ಯಾಯಸಮ್ಮತ

ಚುನಾವಣೆಗಳನ್ನು ನಡೆಸುವ ಮೂಲಾಧಾರವಾಗಿದೆ. ಈ ದೇಶದಲ್ಲಿ ನಡೆಯುವ ಚುನಾವಣೆಗಳನ್ನು ಗಮನಿಸಿದರೆ, ಪ್ರತಿ ವರ್ಷವೂ ಒಂದಿಷ್ಟು ಚುನಾವಣೆಗಳು ಕಂಡು ಬರುತ್ತಿರುವುದು ಸವಾಲಾಗಿದೆ. ಕೆಲವು ರಾಜ್ಯಗಳಲ್ಲಿ ಚುನಾವಣೆಗಳು ನಡೆಯುತ್ತಲೇ ಇರುತ್ತವೆ. ಚುನಾವಣೆಯ ಈ ನಿರಂತರತೆಯಿಂದಾಗಿ ದೇಶವು ಯಾವಾಗಲೂ ಚುನಾವಣಾ ಮೋಡ್‌ನಲ್ಲಿದೆ ಎಂದು ಹೇಳಬಹುದು. ಇದು ಆಡಳಿತಾತ್ಮಕ ಮತ್ತು ನೀತಿ ನಿರ್ಧಾರಗಳ ಮೇಲೆ ಪರಿಣಾಮ ಬೀರುವುದಲ್ಲದೆ ದೇಶದ ಆರ್ಥಿಕತೆಯ ಮೇಲೂ ಪರಿಣಾಮ ಬೀರುತ್ತದೆ. ಇದೆಲ್ಲವನ್ನೂ ತಪ್ಪಿಸಲು, ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವ ಆಲೋಚನೆಯನ್ನು ನೀತಿ ನಿರೂಪಕರು ಮುಂದಿಟ್ಟಿದ್ದಾರೆ.

ಒಂದು ರಾಷ್ಟ್ರ ಒಂದು ಚುನಾವಣೆ ಎಂಬುದು ವಿಶಿಷ್ಟ ಪ್ರಯೋಗವಲ್ಲ, ಏಕೆಂದರೆ 1952, 1957, 1962, 1967ರಲ್ಲಿ ಲೋಕಸಭೆ ಮತ್ತು ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆಗಳು ನಡೆದಿದೆ. 1968–69ರಲ್ಲಿ ವಿವಿಧ ಕಾರಣಗಳಿಗಾಗಿ ಕೆಲವು ರಾಜ್ಯಗಳ ವಿಧಾನಸಭೆಗಳನ್ನು ಅವಧಿಗೆ ಮುನ್ನ ವಿಸರ್ಜಿಸಿದಾಗ ಮತ್ತು 1971ರಲ್ಲಿ ಲೋಕಸಭೆ ಚುನಾವಣೆಗಳು ಅವಧಿಗೂ ಮುನ್ನವೇ ವಿಸರ್ಜಿಸಲ್ಪಟ್ಟಾಗ ಈ ಅನುಕ್ರಮವು ಮುರಿದುಬಿತ್ತು. ನಿಸ್ಸಂಶಯವಾಗಿ ಇಂತಹ ಚುನಾವಣೆಗಳನ್ನು ಈಗಾಗಲೇ ನಡೆಸಿರುವಾಗ ಈಗ ಅವುಗಳನ್ನು ನಡೆಸುವುದರಲ್ಲಿ ಏನು ತೊಂದರೆಯಾಗಿದೆ. ಒಂದಡೆ, ಈಗ ದೇಶದ ಜನಸಂಖ್ಯೆ ಕೂಡ ಹೆಚ್ಚಾಗಿದೆ, ಆದ್ದರಿಂದ ಏಕಕಾಲದಲ್ಲಿ ಚುನಾವಣೆ ನಡೆಸಲು ಸಾಧ್ಯವಿಲ್ಲ ಎಂದು ಕೆಲವು ತಜ್ಞರು ಹೇಳಿದ್ದಾರೆ. ಮತ್ತೊಂದೆಡೆ ದೇಶದಲ್ಲಿ ಜನಸಂಖ್ಯೆ ಹೆಚ್ಚಿದ್ದರೆ, ತಂತ್ರಜ್ಞಾನ ಮತ್ತು ಇತರ ಸಂಪನ್ಮೂಲಗಳನ್ನು ಬಳಸಿಕೊಂಡು ಒಂದು ರಾಷ್ಟ್ರ ಒಂದು ಚುನಾವಣೆ ಎಂಬ ಕಲ್ಪನೆಯನ್ನು ಜಾರಿಗೆ ಮಾಡುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಆದರೆ ಇದೆಲ್ಲವೂ ಅದರ ಮಹತ್ವವನ್ನು ಸಾಬೀತುಪಡಿಸುವುದಿಲ್ಲ, ಇದಕ್ಕಾಗಿ ನಾವು ಅದರ ಪರವಾಗಿ ಮತ್ತು ವಿರುದ್ಧವಾಗಿ ನೀಡಿದ ವಾದಗಳನ್ನು ವಿಶ್ಲೇಷಿಸಬೇಕಾಗುತ್ತದೆ.

**ಒಂದು ರಾಷ್ಟ್ರ ಒಂದು ಚುನಾವಣೆಯ ಪರವಾದ ವಾದಗಳು**

ಒಂದು ರಾಷ್ಟ್ರ ಒಂದು ಚುನಾವಣೆಯ ಮೂಲಕ ಪರಿಹರಿಸಬಹುದಾದ ಪ್ರಮುಖ ಸಮಸ್ಯೆಯೆಂದರೆ, ಆಡಳಿತದ ಬಿಕ್ಕಟ್ಟಿನ ಸಮಸ್ಯೆ. ಆಗಾಗ್ಗೆ ಚುನಾವಣೆಗಳು ಇರುವ ಕಾರಣ ದೇಶದಲ್ಲಿ ನೀತಿ ಸಂಹಿತೆ ಪದೇ ಪದೇ ಜಾರಿಗೆ ಬರುತ್ತದೆ. ಇದರಿಂದ ಸರ್ಕಾರಕ್ಕೆ ಅಗತ್ಯ ನೀತಿ ನಿರ್ಧಾರಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ ಹಾಗೂ ನಾನಾ ಯೋಜನೆಗಳ ಅನುಷ್ಠಾನಕ್ಕೆ ತೊಂದರೆಯಾಗುತ್ತಿದ್ದು, ಇದರಿಂದ ಅಭಿವೃದ್ಧಿ ಕಾರ್ಯಗಳು ವಿಳಂಬವಾಗುತ್ತಿವೆ. ಚುನಾವಣೆ ನ್ಯಾಯಸಮ್ಮತತೆ ಕಾಪಾಡಲು ನೀತಿ ಸಂಹಿತೆ ಜಾರಿಯಲ್ಲಿದೆ. ಇದರ ಅಡಿಯಲ್ಲಿ ಚುನಾವಣಾ ಆಯೋಗದಿಂದ ಚುನಾವಣಾ ಅಧಿಸೂಚನೆ ಹೊರಡಿಸಿದ ನಂತರ ಯಾವುದೇ ಹೊಸ ಯೋಜನೆಯ ಘೋಷಣೆ, ಹೊಸ ಯೋಜನೆಯ ಪ್ರಾರಂಭ ಅಥವಾ ಆರ್ಥಿಕ ಅನುಮೋದನೆ ಮತ್ತು ಆಡಳಿತ ಪಕ್ಷದ ನೇಮಕಾತಿ ಪ್ರಕ್ರಿಯೆಗಳನ್ನು ನಿಷೇಧಿಸಲಾಗಿದೆ. ಇದರ ಹಿಂದಿನ ಮೂಲ ಉದ್ದೇಶವೆಂದರೆ, ಆಡಳಿತ ಪಕ್ಷವು ಚುನಾವಣೆ ಸಂದರ್ಭದಲ್ಲಿ ಹೆಚ್ಚುವರಿ ಲಾಭವನ್ನು ಪಡೆಯುತ್ತದೆ. ಹಾಗಾಗಿ ದೇಶದಲ್ಲಿ ಒಮ್ಮೆ ಮಾತ್ರ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಚುನಾವಣೆ ನಡೆದರೆ ಕೆಲ ಕಾಲ ಮಾದರಿ ನೀತಿ ಸಂಹಿತೆ ಜಾರಿಯಲ್ಲಿದ್ದು, ಇದಾದ ಬಳಿಕ ಅಭಿವೃದ್ಧಿ ಕಾಮಗಾರಿಗಳು ಸುಸೂತ್ರವಾಗಿ ಪೂರ್ಣಗೊಳ್ಳಲು ಸಾಧ್ಯ.

ಪುನರಾವರ್ತಿತ ಚುನಾವಣೆಗಳಲ್ಲಿ ಭಾರಿ ಪ್ರಮಾಣದ ವೆಚ್ಚವನ್ನು ಕಡಿಮೆ ಮಾಡುತ್ತದೆ. ಪದೇ

ಪದೇ ಚುನಾವಣೆ ನಡೆಯುತ್ತಿರುವುದರಿಂದ ಸರ್ಕಾರದ ಖಜಾನೆಗೆ ಹೆಚ್ಚುವರಿ ಆರ್ಥಿಕ ಹೊರೆಯಾಗುತ್ತಿರುವುದು ಗಮನಿಸಬೇಕಾದ ಅಂಶ. ಈ ಹೆಚ್ಚುವರಿ ವೆಚ್ಚವನ್ನು ಆರೋಗ್ಯ, ಶಿಕ್ಷಣ ಮತ್ತಿತರ ಸೇವೆಗಳಿಗೆ ವಿನಿಯೋಗಿಸಬಹುದು.

ಕಪ್ಪುಹಣ ಮತ್ತು ಭ್ರಷ್ಟಾಚಾರವನ್ನು ತಡೆಯಲು ಸಹಾಯ ಮಾಡುತ್ತದೆ. ಚುನಾವಣೆಯ ಸಂದರ್ಭದಲ್ಲಿ ರಾಜಕೀಯ ಪಕ್ಷಗಳಿಗೆ ಬಂಡವಾಳಶಾಹಿಗಳ ಹಿತಾಸಕ್ತಿ ನೀತಿಗಳನ್ನು ರೂಪಿಸುತ್ತದೆ. ಇದನ್ನು 'ಕ್ರೋನಿ ಕ್ಯಾಪಿಟಲಿಸಂ' ಎಂದು ಕರೆಯಲಾಗುತ್ತದೆ. ಇದರಿಂದಾಗಿ ಸರ್ಕಾರವು ತನ್ನ ನೀತಿಗಳನ್ನು ದುರ್ಬಳಕೆ ಮಾಡಿಕೊಂಡು ಬಂಡವಾಳಶಾಹಿಗಳಿಗೆ ಲಾಭವಾಗುತ್ತದೆ.

ಒಂದು ರಾಷ್ಟ್ರ ಒಂದು ಚುನಾವಣೆಯ ಮೂಲಕ ಸಾಮಾಜಿಕ ಸಾಮರಸ್ಯವನ್ನು ಮತ್ತೆ ಮತ್ತೆ ಕದಡದಂತೆ ಉಳಿಸಬಹುದು. ಭಾರತೀಯ ಚುನಾವಣಾ ನಡವಳಿಕೆಯ ಮುಖ್ಯ ಲಕ್ಷಣಗಳು ಕೋಮುವಾದ, ಜಾತಿವಾದ, ಭಾಷಾವಾದ, ಪ್ರಾದೇಶಿಕತೆ, ರಾಷ್ಟ್ರೀಯತೆ ಇತ್ಯಾದಿ. ರಾಜಕೀಯ ಪಕ್ಷಗಳು ಮತಗಳನ್ನು ಧ್ರುವೀಕರಿಸುವ ತೀವ್ರತೆಗೆ ಒಳಪಡಿಸಲಾಗುತ್ತದೆ. ರಾಜಕೀಯ ಪಕ್ಷಗಳಿಂದ ಚುನಾವಣೆ ಸಂದರ್ಭದಲ್ಲಿ ಗಡಿಯಲ್ಲಿ ಸೈನಿಕರ ಹತ್ಯೆಯಾಗುತ್ತಿದೆ, ಭಯೋತ್ಪಾದಕರು ದೇಶದ ಗಡಿಯೊಳಗೆ ನುಸುಳುತ್ತಿದ್ದಾರೆಂಬ ಹೇಳಿಕೆಗಳಿಂದ ಜನರಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿದೆ. ರಾಷ್ಟ್ರೀಯತೆಯಂತಹ ಭಾವನೆಗಳನ್ನು ಹರಡುವ ಮೂಲಕ ಮತ ಬ್ಯಾಂಕ್ ಅನ್ನು ಖಚಿತಪಡಿಸಿಕೊಳ್ಳಲು ಇದನ್ನು ಮಾಡಲಾಗುತ್ತದೆ. ಈ ಕಾರಣದಿಂದಾಗಿ, ದೇಶದ ಸಾಮಾಜಿಕ ರಚನೆಯು ಪದೇ ಪದೇ ಅಸ್ತವ್ಯಸ್ತವಾಗದಂತೆ ಉಳಿಸಬಹುದು. ಐದು ವರ್ಷಕ್ಕೊಮ್ಮೆ ಚುನಾವಣೆ ನಡೆದರೆ ಸಮಾಜದಲ್ಲಿನ ಇಂತಹ ಕಹಿ ಘಟನೆಗಳನ್ನು ಕಡಿಮೆ ಮಾಡಬಹುದು.

ಏಕಕಾಲಕ್ಕೆ ಚುನಾವಣೆ ನಡೆಸುವುದರಿಂದ ಸರ್ಕಾರಿ ನೌಕರರು ಮತ್ತು ಭದ್ರತಾ ಪಡೆಗಳನ್ನು ಮತ್ತೆ ಮತ್ತೆ ಚುನಾವಣಾ ಕರ್ತವ್ಯಕ್ಕೆ ಹಾಕುವ ಅಗತ್ಯ ಬೀಳುವುದಿಲ್ಲ. ಇದರಿಂದ ಅವರ ಸಮಯ ಉಳಿತಾಯವಾಗುವುದಲ್ಲದೆ ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ. ಚುನಾವಣೆ ನಡೆಸಲು ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕರು, ಸರ್ಕಾರಿ ನೌಕರರು, ಪೊಲೀಸ್ ಮತ್ತು ಭದ್ರತಾ ಪಡೆಗಳನ್ನು ನಿಯೋಜಿಸುವುದರ ಹೊರತಾಗಿ, ಆಗಾಗ್ಗೆ ಚುನಾವಣೆಗಳ ಸಂದರ್ಭದಲ್ಲಿ ಸಾಮಾನ್ಯ ಜನರ ಜೀವನದ ಮೇಲೆ ಕೂಡ ಪರಿಣಾಮ ಬೀರುತ್ತದೆ.

**ಒಂದು ರಾಷ್ಟ್ರ ಒಂದು ಚುನಾವಣೆ ವಿರುದ್ಧದ ವಾದಗಳು**

ಒಂದು ರಾಷ್ಟ್ರ ಒಂದು ಚುನಾವಣೆ ವಿರುದ್ಧದ ವಿಶ್ಲೇಷಕರು ಸಂವಿಧಾನವು ನಮಗೆ ಸಂಸದೀಯ ಮಾದರಿಯನ್ನು ಒದಗಿಸಿದೆ ಎಂದು ನಂಬುತ್ತಾರೆ. ಅದರ ಅಡಿಯಲ್ಲಿ ಲೋಕಸಭೆ ಮತ್ತು ವಿಧಾನಸಭೆಗಳನ್ನು ಐದು ವರ್ಷಗಳವರೆಗೆ ಚುನಾಯಿಸಲಾಗುತ್ತದೆ, ಆದರೆ ಏಕಕಾಲದಲ್ಲಿ ನಡೆಸುವ ವಿಷಯದಲ್ಲಿ ನಮಗೆ ಭಿನ್ನಾಭಿಪ್ರಾಯಗಳಿವೆ. ಸಂವಿಧಾನದಲ್ಲಿ ಈ ಕಲ್ಪನೆಗೆ ಸಂಪೂರ್ಣವಾಗಿ ವಿರುದ್ಧವಾದ ಅನೇಕ ನಿಬಂಧನೆಗಳಿವೆ. ಉದಾಹರಣೆಗೆ, ವಿಧಿ 2ರ ಅಡಿಯಲ್ಲಿ ಸಂಸತ್ತು ಭಾರತೀಯ ಒಕ್ಕೂಟದಲ್ಲಿ ಹೊಸ ರಾಜ್ಯವನ್ನು ಸೇರಿಸಬಹುದು ಮತ್ತು ವಿಧಿ 3ರ ಅಡಿಯಲ್ಲಿ ಸಂಸತ್ತು ಹೊಸ ರಾಜ್ಯವನ್ನು ರಚಿಸಬಹುದು. ಅಲ್ಲಿ ಪ್ರತ್ಯೇಕ ಚುನಾವಣೆಗಳನ್ನು ನಡೆಸಬೇಕಾಗಬಹುದು. ಅದೇ ರೀತಿ, ವಿಧಿ 85 (2) (ಬಿ) ಪ್ರಕಾರ, ರಾಷ್ಟ್ರಪತಿಗಳು ಲೋಕಸಭೆಯನ್ನು ವಿಸರ್ಜಿಸಬಹುದು ಮತ್ತು 174 (2) (ಬಿ) ವಿಧಿಯ ಪ್ರಕಾರ ರಾಜ್ಯಪಾಲರು ಐದು ವರ್ಷಗಳ ಮುಂಚೆಯೇ ವಿಧಾನಸಭೆಯನ್ನು ವಿಸರ್ಜಿಸಬಹುದು. ವಿಧಿ 352ರ ಅಡಿಯಲ್ಲಿ ಯುದ್ಧ, ಬಾಹ್ಯ ಆಕ್ರಮಣ

ಅಥವಾ ಸಶಸ್ತ್ರ ದಂಗೆಯ ಸಂದರ್ಭದಲ್ಲಿ, ರಾಷ್ಟ್ರೀಯ ತುರ್ತು ಪರಿಸ್ಥಿತಿಯನ್ನು ಹೇರುವ ಮೂಲಕ ಮತ್ತು ಅಂತಹ ಪರಿಸ್ಥಿತಿಯಲ್ಲಿ ಸಂಬಂಧಪಟ್ಟ ರಾಜ್ಯದ ರಾಜಕೀಯ ಸಮೀಕರಣದಲ್ಲಿ ಅನಿರೀಕ್ಷಿತ ಹಿಮ್ಮುಖದ ಕಾರಣದಿಂದ ಲೋಕಸಭೆಯ ಅಧಿಕಾರಾವಧಿಯನ್ನು ವಿಸ್ತರಿಸಬಹುದು. ಇದು ಒಂದು ರಾಷ್ಟ್ರ ಒಂದು ಚುನಾವಣೆಗೆ ವಿರುದ್ದವಾಗಿರುತ್ತದೆ.

ಈ ಕಲ್ಪನೆಯು ಫೆಡರಲ್ ರಚನೆಗೆ ವಿರುದ್ಧವಾಗಿರುತ್ತದೆ ಮತ್ತು ಸಂಸದೀಯ ಪ್ರಜಾಪ್ರಭುತ್ವಕ್ಕೆ ಮಾರಕ ಹೆಜ್ಜೆಯಾಗಿದೆ. ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆಗಳು ನಡೆದರೆ, ಕೆಲವು ವಿಧಾನಸಭೆಗಳ ಅಧಿಕಾರಾವಧಿಯನ್ನು ಅವರ ಇಚ್ಚೆಗೆ ವಿರುದ್ಧವಾಗಿ ವಿಸ್ತರಿಸಲಾಗಿದೆ ಅಥವಾ ಕಡಿಮೆಗೊಳಿಸಲಾಗುತ್ತದೆ. ಇದು ರಾಜ್ಯಗಳ ಸ್ವಾಯತ್ತತೆಯ ಮೇಲೆ ಪರಿಣಾಮ ಬೀರುತ್ತದೆ. ಭಾರತದ ಫೆಡರಲ್ ರಚನೆಯು ಸಂಸದೀಯ ಆಡಳಿತ ವ್ಯವಸ್ಥೆಯಿಂದ ಪ್ರೇರಿತವಾಗಿದೆ ಮತ್ತು ಸಂಸದೀಯ ಆಡಳಿತ ವ್ಯವಸ್ಥೆಯಲ್ಲಿ ಚುನಾವಣೆಗಳ ಆವರ್ತನವು ನಿರಾಕರಿಸಲಾಗದ ಸತ್ಯವಾಗಿದೆ. ಇದರೊಂದಿಗೆ ಏಕಕಾಲಕ್ಕೆ ಚುನಾವಣೆ ಆಯೋಜಿಸಿದರೆ ಲೋಕಸಭೆ, ವಿಧಾನಸಭೆ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಚುನಾವಣೆಗೆ ಒಂದೇ ಚುನಾವಣಾ ಪಟ್ಟಿ ಸಿದ್ಧವಾಗಲಿದ್ದು, ಇದರಲ್ಲಿ ರಾಜ್ಯ ಚುನಾವಣಾ ಆಯೋಗದ ಅಧಿಕಾರ ಕಡಿತವಾಗಲಿದೆ ಎನ್ನುತ್ತಾರೆ ವಿದ್ವಾಂಸರು.

ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆಗಳು ನಡೆದರೆ, ಪ್ರಾದೇಶಿಕ ಸಮಸ್ಯೆಗಳು ರಾಷ್ಟ್ರೀಯ ಸಮಸ್ಯೆಗಳಿಗೆ ಗೌಣವಾಗುವ ಸಾಧ್ಯತೆ ಹೆಚ್ಚು ಅಥವಾ ಇದಕ್ಕೆ ವಿರುದ್ಧವಾಗಿ ರಾಷ್ಟ್ರೀಯ ಸಮಸ್ಯೆಗಳು ಸೋಲುತ್ತವೆ. ಪ್ರಾದೇಶಿಕ ಸಮಸ್ಯೆಗಳ ಮುಂದೆ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತವೆ. ವಾಸ್ತವವಾಗಿ, ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳ ಸ್ವರೂಪ ಮತ್ತು ಸಮಸ್ಯೆಗಳು ಸಂಪೂರ್ಣವಾಗಿ ವಿಭಿನ್ನವಾಗಿವೆ. ಕೇಂದ್ರ ಸರ್ಕಾರಕ್ಕೆ ಲೋಕಸಭೆ ಚುನಾವಣೆ ನಡೆದರೆ, ರಾಜ್ಯ ಸರ್ಕಾರ ರಚಿಸಲು ವಿಧಾನಸಭೆ ಚುನಾವಣೆ ನಡೆಯುತ್ತದೆ. ಆದ್ದರಿಂದ ಲೋಕಸಭೆಯಲ್ಲಿ ರಾಷ್ಟ್ರೀಯ ಪ್ರಮುಖ್ಯತೆಯ ವಿಷಯಗಳಿಗೆ ಮಹತ್ವ ನೀಡಿದರೆ, ವಿಧಾನಸಭೆ ಚುನಾವಣೆಯಲ್ಲಿ ಪ್ರಾದೇಶಿಕ ಪ್ರಾಮುಖ್ಯತೆಯ ವಿಷಯಗಳು ಮುಂಚೂಣಿಯಲ್ಲಿವೆ. ಮೇಲಾಗಿ ರಾಷ್ಟ್ರೀಯ ನಾಯಕತ್ವದ ಮೇಲೆ ವರ್ಚಸ್ವಿ ನಾಯಕತ್ವದ ನಾಯಕನಿದ್ದರೂ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ತಮ್ಮ ಅಲೆಯಿಂದಲೇ ಪ್ರಭಾವ ಬೀರಬಲ್ಲರು.

ಪ್ರಜಾಪ್ರಭುತ್ವ ಸರ್ಕಾರವನ್ನು ಜನರ ಆಳ್ವಿಕೆಯ ಸರ್ಕಾರವೆಂದು ಕರೆಯಲಾಗುತ್ತದೆ. ಈ ದೇಶದಲ್ಲಿ ಸಂಸದೀಯ ವ್ಯವಸ್ಥೆ ಇರುವುದರಿಂದ ವಿವಿಧ ಸಮಯಗಳಲ್ಲಿ ಚುನಾವಣೆಗಳು ನಡೆಯುತ್ತವೆ ಮತ್ತು ಸಾರ್ವಜನಿಕ ಪ್ರತಿನಿಧಿಗಳು ಸಾರ್ವಜನಿಕರಿಗೆ ನಿರಂತರವಾಗಿ ಜವಾಬ್ದಾರರಾಗಿರಬೇಕಾಗುತ್ತದೆ. ಭಾರತದ ಮಾಜಿ ಮುಖ್ಯ ಚುನಾವಣಾ ಆಯುಕ್ತ ಎಸ್. ವೈ. ಖುರೇಷಿಯವರು ಪದೇ ಪದೇ ಚುನಾವಣೆ ನಡೆಯುವುದರಿಂದ ಜವಾಬ್ದಾರಿ ಹೆಚ್ಚುತ್ತದೆ. ಎಂದು ಹೇಳಿದರು. ಪ್ರಜಾಪ್ರಭುತ್ವದಲ್ಲಿ ಹೊಣೆಗಾರಿಕೆಯ ಕೊರತೆ ಎಷ್ಟು ದೊಡ್ಡ ಸಮಸ್ಯೆಯೋ ಅಷ್ಟೇ ನಿಭಾಯಿಸಲು ಕೂಡ ಸುಲಭ. ಇದರ ಹೊರತಾಗಿ ಯಾವುದೇ ಪಕ್ಷ ಅಥವಾ ನಾಯಕರು ಚುನಾವಣೆಯಲ್ಲಿ ಗೆದ್ದ ನಂತರ ಸ್ವಯಂಪ್ರೇರಿತವಾಗಿ ಕೆಲಸ ಮಾಡಲು ಸಾಧ್ಯವಿಲ್ಲ ಏಕೆಂದರೆ ಅದು ಕಡಿಮೆ ಅಂತರದಲ್ಲಿ ಕೆಲವು ಚುನಾವಣೆಗಳನ್ನು ಎದುರಿಸಬೇಕಾಗುತ್ತದೆ. ಎರಡೂ ಚುನಾವಣೆಗಳು ಏಕಕಾಲದಲ್ಲಿ ನಡೆದರೆ ಹೀಗಾಗುತ್ತದೆ ಎಂದು ವಿಶ್ಲೇಷಕರು ನಂಬುತ್ತಾರೆ.

ಒಂದು ರಾಷ್ಟ್ರ ಒಂದು ಚುನಾವಣೆಗೆ ವಿರೋಧವಾಗಿ ನೀಡಲಾದ ಇತರ ಕಾರಣಗಳೆಂದರೆ, ಜನಸಂಖ್ಯೆಯ ದೃಷ್ಟಿಯಿಂದ ಭಾರತವು ವಿಶ್ವದ ಮೊದಲನೆಯ ಅತಿದೊಡ್ಡ ದೇಶವಾಗಿದೆ, ಆದ್ದರಿಂದ ಹೆಚ್ಚಿನ ಜನಸಂಖ್ಯೆ ಮತ್ತು ಮೂಲಸೌಕರ್ಯಗಳ

ಕೊರತೆಯಿಂದಾಗಿ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಚುನಾವಣೆಗಳನ್ನು ನಡೆಸುವುದು ಸರಿಯಲ್ಲ. ಏಕಕಾಲದಲ್ಲಿ ಅದು ಸಂಭವಿಸುತ್ತದೆ. "ಒಂದು ರಾಷ್ಟ್ರ ಒಂದು ಚುನಾವಣೆ" ಪರಿಕಲ್ಪನೆಯು 'ಒಬ್ಬ ನಾಯಕ'ನನ್ನು ಪ್ರೋತ್ಸಾಹಿಸುತ್ತದೆ ಮತ್ತು ಪ್ರಾದೇಶಿಕ ಪಕ್ಷಗಳ ಅಸ್ತಿತ್ವಕ್ಕೆ ಸವಾಲು ಹಾಕುತ್ತದೆ. ಭಾರತೀಯ ಫೆಡರಲಿಸಂಗೆ ಸವಾಲಾಗಿ ಪರಿಗಣಿಸಲಾದ ರಾಜ್ಯ ಚುನಾವಣಾ ಆಯೋಗದ ಅಧಿಕಾರವನ್ನು ದುರ್ಬಲಗೊಳಿಸುತ್ತದೆ.

ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ಸಾಂವಿಧಾನಿಕ ಜವಾಬ್ದಾರಿ ಮಾತ್ರವಲ್ಲ ಬದಲಿಗೆ ಸಂವಿಧಾನದ ಮೂಲತತ್ವವೂ ಹೌದು. ಇದರ ಸಾಕಾರ ಚುನಾವಣಾ ಆಯೋಗದ್ದೇ ನೇರ ಹೊಣೆ. ಮುಕ್ತವಾಗಿ ಹಾಗೂ ನ್ಯಾಯಸಮ್ಮತವಾಗಿ ಚುನಾವಣೆ ನಡೆಯುತ್ತಿದೆ ಎಂಬ ವಿಶ್ವಾಸವನ್ನು ಜನರಲ್ಲಿ ಹಾಗೂ ರಾಜಕೀಯ ಪಕ್ಷಗಳಲ್ಲಿಯೂ ಮೂಡಿಸಬೇಕಾದ ಜವಾಬ್ದಾರಿ ಆಯೋಗದ್ದು. ಚುನಾವಣಾ ಆಯೋಗದ ಬಗ್ಗೆ ದೇಶದ ಜನರಲ್ಲಿ, ರಾಜಕೀಯ ಪಕ್ಷಗಳಲ್ಲಿ ಪ್ರಾಮಾಣಿಕ ನಂಬಿಕೆ ಉಂಟುಮಾಡಬಲ್ಲ ನಡವಳಿಕೆಯನ್ನು ರೂಢಿಸಿಕೊಳ್ಳಬೇಕಾದ ಅಗತ್ಯತೆಯಂತೂ ಮೊದಲಿಗಿಂತಲೂ ಈಗ ಹೆಚ್ಚಿದೆ.

**ಒಂದು ರಾಷ್ಟ್ರ ಒಂದು ಚುನಾವಣೆಗೆ ಮುಂದಿರುವ ಪ್ರಮುಖ ಸವಾಲುಗಳು**

1. ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳ ಅಧಿಕಾರಾವಧಿಯನ್ನು ಸಮನ್ವಯಗೊಳಿಸುವುದು ಅದರ ಹಾದಿಯಲ್ಲಿ ದೊಡ್ಡ ಸವಾಲಾಗಿದೆ, ಇದರಿಂದಾಗಿ ಎರಡೂ ಚುನಾವಣೆಗಳನ್ನು ನಿಗದಿತ ಸಮಯದೊಳಗೆ ನಡೆಸಲು ಕಷ್ಟಸಾಧ್ಯ. ಜೊತೆಗೆ ಹವಮಾನ ವೈಪರೀತ್ಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.
2. ಲೋಕಸಭೆಯೊಂದಿಗೆ ರಾಜ್ಯ ವಿಧಾನಸಭೆಗಳ ಅಧಿಕಾರಾವಧಿಯನ್ನು ಸಂಯೋಜಿಸಲು, ರಾಜ್ಯ ವಿಧಾನಸಭೆಗಳ ಅಧಿಕಾರಾಧಿಯನ್ನು ಹೆಚ್ಚಿಸಬಹುದು ಮತ್ತು ಅದಕ್ಕೆ ಅನುಗುಣವಾಗಿ ಕಡಿಮೆ ಮಾಡಬಹುದು ಆದರೆ ಇದಕ್ಕೆ ಕೆಲವು ಸಾಂವಿಧಾನಿಕ ತಿದ್ದುಪಡಿಗಳ ಅಗತ್ಯವಿರುತ್ತದೆ.
3. ಸಂವಿಧಾನದ 83ನೇ ವಿಧಿ ಪ್ರಕಾರ, ಲೋಕಸಭೆಯ ಅಧಿಕಾರಾವಧಿಯು ಅದರ ಮೊದಲ ಸಭೆಯ ದಿನಾಂಕದಿಂದ ಐದು ವರ್ಷಗಳಾಗಿರಬೇಕು ಎಂದು ಅದು ಹೇಳುತ್ತದೆ.
4. 85ನೇ ವಿಧಿಯು ಲೋಕಸಭೆಯನ್ನು ವಿಸರ್ಜಿಸುವ ಅಧಿಕಾರವನ್ನು ರಾಷ್ಟ್ರಪತಿಗಳಿಗೆ ನೀಡುತ್ತದೆ.
5. 172ನೇ ವಿಧಿಯು ವಿಧಾನಸಭೆಯ ಅಧಿಕಾರಾವಧಿಯ ಅದರ ಮೊದಲ ಸಭೆಯ ದಿನಾಂಕದಿಂದ ಐದು ವರ್ಷಗಳು ಎಂದು ಹೇಳುತ್ತದೆ.
6. 174ನೇ ವಿಧಿಯು ರಾಜ್ಯದ ರಾಜ್ಯಪಾಲರಿಗೆ ವಿಧಾನಸಭೆಯನ್ನು ವಿಸರ್ಜಿಸುವ ಹಕ್ಕನ್ನು ನೀಡುತ್ತದೆ.
7. 356ನೇ ವಿಧಿಯು ರಾಜ್ಯದಲ್ಲಿನ ಸಾಂವಿಧಾನಿಕ ಯಂತ್ರದ ವೈಫಲ್ಯದ ದೃಷ್ಟಿಯಿಂದ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಲು ಕೇಂದ್ರ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಇದಲ್ಲದೇ 1951ರ ಜನತಾ ಪ್ರಾತಿನಿಧ್ಯ ಕಾಯ್ದೆಯ ಜೊತೆಗೆ ಅದಕ್ಕೆ ಸಂಬಂಧಿಸಿದ ಸಂಸದೀಯ ವಿಧಾನಕ್ಕೂ ತಿದ್ದುಪಡಿ ತರಬೇಕಾಗುತ್ತದೆ. ಒಂದು ರಾಷ್ಟ್ರ, ಒಂದು ಚುನಾವಣೆಗಾಗಿ ಎಲ್ಲ ರಾಜಕೀಯ ಪಕ್ಷಗಳನ್ನು ಒಪ್ಪಿಸುವುದು ಸುಲಭದ ಮಾತಲ್ಲ. 'ಒಂದು ರಾಷ್ಟ್ರ ಒಂದು ಚುನಾವಣೆ' ಎಂಬ ಈ ಪರಿಕಲ್ಪನೆಯು ದೇಶದ ಒಕ್ಕೂಟ ರಚನೆಗೆ ವಿರುದ್ಧವಾಗಿರಬಹುದು ಎಂದು ಕೆಲವು ರಾಜಕೀಯ ತಜ್ಞರು ನಂಬಿದ್ದಾರೆ. ಇದಲ್ಲದೇ, ಭ್ರಷ್ಟಾಚಾರವನ್ನು ಉತ್ತೇಜಿಸುವ ಕಾರಣಗಳ ಪಟ್ಟಿಯಲ್ಲಿ

ಚುನಾವಣೆಗಳಲ್ಲಿ ವ್ಯಯಿಸಲಾದ ಅಪಾರ ಪ್ರಮಾಣದ ಹಣವು ಅಗ್ರಸ್ಥಾನದಲ್ಲಿದೆ. ಪ್ರಸ್ತುತ ಪ್ರತಿ ಮತಗಟ್ಟೆಯಲ್ಲಿ ಒಂದು ಇವಿಎಂ ಜೊತೆಗೆ ಒಂದು ವಿವಿಪ್ಯಾಟ್‌ನ್ನು ಮತದಾನಕ್ಕೆ ಬಳಸಲಾಗುತ್ತಿದೆ. ಲೋಕಸಭೆ ಮತ್ತು ವಿಧಾನಸಭೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸುವ ಕುರಿತು ಅದರ ಸಂಖ್ಯೆ ದ್ವಿಗುಣಗೊಳ್ಳುತ್ತದೆ. ಹೆಚ್ಚುವರಿ ಮತಗಟ್ಟೆ ಸಿಬ್ಬಂದಿ ಮತ್ತು ಬಿಗಿಯಾದ ಭದ್ರತಾ ವ್ಯವಸ್ಥೆ ಹಾಗೂ ಈ ಕೆಲಸಕ್ಕೆ ಅಗತ್ಯ ಕೇಂದ್ರ ಪೊಲೀಸ್ ಪಡೆಗಳ ಸಂಖ್ಯೆಯನ್ನು ಹೆಚ್ಚಿಸದೆ ಇದು ಸಾಧ್ಯವಿಲ್ಲ. ಇಷ್ಟು ದೊಡ್ಡ ಸಂಖ್ಯೆಯ ಇವಿಎಂ ಮತ್ತು ವಿವಿಪ್ಯಾಟ್ ಯಂತ್ರಗಳು ಏಕಕಾಲದಲ್ಲಿ ಅದನ್ನು ಸುರಕ್ಷಿತವಾಗಿಡುವುದು ಕೂಡ ದೊಡ್ಡ ಸವಾಲಾಗಿದೆ, ಏಕೆಂದರೆ ಚುನಾವಣೆ ಆಯೋಗವು ಪ್ರಸ್ತುತ ಅವುಗಳನ್ನು ಸುರಕ್ಷಿತವಾಗಿರಿಸುವ ಸಮಸ್ಯೆಯನ್ನು ಎದುರಿಸುತ್ತಿದೆ.

**ಕಾನೂನು ಆಯೋಗದ 170ನೇ ವರದಿ**

- 1999ರಲ್ಲಿ ಕಾನೂನು ಆಯೋಗವು ತನ್ನ 170ನೇ ವರದಿಯಲ್ಲಿ ಲೋಕಸಭೆ ಮತ್ತು ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆಗಳನ್ನು ಬೆಂಬಲಿಸಿತು.
- ಚುನಾವಣಾ ಸುಧಾರಣೆಗಳ ಕುರಿತಾದ ಕಾನೂನು ಆಯೋಗದ ಈ ವರದಿಯು ದೇಶದ ರಾಜಕೀಯ ವ್ಯವಸ್ಥೆಯ ಕಾರ್ಯಚಟುವಟಿಕೆಗಳ ಕುರಿತು ಇದುವರೆಗಿನ ಅತ್ಯಂತ ಸಮಗ್ರ ದಾಖಲೆಗಳಲ್ಲಿ ಒಂದಾಗಿದೆ ಎಂದು ಪರಿಗಣಿಸಲಾಗಿದೆ. ಈ ವರದಿಯ ಸಂಪೂರ್ಣ ಅಧ್ಯಾಯವು ಈ ಸಮಸ್ಯೆಯನ್ನು ಕೇಂದ್ರೀಕರಿಸುತ್ತದೆ.
- ಈ ವರದಿಯಲ್ಲಿ ರಾಜಕೀಯ ಚುನಾವಣಾ ಸುಧಾರಣೆಗಳು, ಪಕ್ಷದ ಸುಧಾರಣೆಗಳ ಬಗ್ಗೆಯೂ ಮಾತನಾಡಲಾಗಿದೆ. ರಾಜಕೀಯ ಪಕ್ಷಗಳ ನಿಧಿ ಸಂಗ್ರಹಿಸುವ ವಿಧಾನಗಳು ಮತ್ತು ಅವುಗಳಲ್ಲಿನ ಅಕ್ರಮಗಳು ಮತ್ತು ರಾಜಕೀಯ ಪ್ರಕ್ರಿಯೆಗಳ ಮೇಲೆ ಇವೆಲ್ಲವುಗಳ ಪ್ರಭಾವ ಇತ್ಯಾದಿಗಳನ್ನು ಈ ವರದಿಯಲ್ಲಿ ವಿಶ್ಲೇಷಿಸಲಾಗಿದೆ.
- ಇಂದು ಇವಿಎಂ ಋಣಾತ್ಮಕ ಮತದಾನದ ವ್ಯವಸ್ಥೆಯನ್ನು ಜಾರಿಗೆ ತರಬೇಕು ಎಂದು ಹೇಳುವ ಮೂಲಕ ನೋಟಾ ಆಯ್ಕೆಯನ್ನು ಕಾನೂನು ಆಯೋಗವು ತನ್ನ ವರದಿಯಲ್ಲಿ ಶಿಫಾರಸು ಮಾಡಿದೆ. ಇದಾದ ಬಳಿಕ ಸುಪ್ರೀಂ ಕೋರ್ಟ್ ಸೂಚನೆ ಮೇರೆಗೆ ಮತದಾರರಿಗೆ ಈ ಆಯ್ಕೆಯನ್ನು ನೀಡಲಾಗಿತ್ತು.

**ಉಪಸಂಹಾರ**

ಚುನಾವಣೆಯನ್ನು ಪ್ರಜಾಪ್ರಭುತ್ವದ ಕೀಲಿಕೈ ಹಾಗೂ ಅತೀ ದೊಡ್ಡ ಆಚರಣೆ (ಹಬ್ಬ) ಎಂದು ಪರಿಗಣಿಸಲಾಗಿದೆ. ಭಾರತದಲ್ಲಿ ನಡೆಯುವ ಚುನಾವಣೆಗಳನ್ನು ಗಮನಿಸಿದರೆ ಪ್ರತಿ ವರ್ಷವೂ ಒಂದಲ್ಲ ಒಂದು ರಾಜ್ಯದಲ್ಲಿ ಚುನಾವಣೆ ನಡೆಯುತ್ತಿರುವುದು ಕಂಡು ಬರುತ್ತಿದೆ. ಚುನಾವಣೆಗಳ ನಿರಂತರತೆಯಿಂದಾಗಿ ದೇಶವು ಚುನಾವಣಾ ಮೋಡ್‌ನಲ್ಲಿಯೇ ಉಳಿದಿದೆ. ಇದು ಆಡಳಿತಾತ್ಮಕ ಮತ್ತು ನೀತಿ ನಿರ್ಧಾರಗಳ ಮೇಲೆ ಪರಿಣಾಮ ಬೀರುವುದಲ್ಲದೆ, ಬದಲಿಗೆ ದೇಶದ ಖಜಾನೆಗೆ ಹೆಚ್ಚಿನ ಹೊರೆ ಬೀಳುತ್ತದೆ. ಒಂದು ಅಂದಾಜಿನ ಪ್ರಕಾರ, ಇತ್ತೀಚೆಗೆ ನಡೆದ 17ನೇ ಲೋಕಸಭೆ ಚುನಾವಣೆಗೆ 60 ಸಾವಿರ ಕೋಟಿ ರೂ.ಗಳಗಿಂತ ಹೆಚ್ಚು ಖರ್ಚು ಮಾಡಲಾಗಿದೆ ಮತ್ತು ಸುಮಾರು ಮೂರು ತಿಂಗಳ ಕಾಲ ದೇಶವು ಚುನಾವಣಾ ಮೋಡ್‌ನಲ್ಲಿಯೇ ಇತ್ತು. ಇಂತಹ ಸಂದರ್ಭದಲ್ಲಿ 'ಒಂದು ರಾಷ್ಟ್ರ ಒಂದು ಚುನಾವಣೆ' ಕಲ್ಪನೆಯು ವಾಸ್ತವವಾಗಿ ಪ್ರಾಯೋಗಿಕವಾಗಿದೆಯೇ ಅಥವಾ ಇಲ್ಲವೇ ಎಂಬುದರ ಕುರಿತು ತಜ್ಞರಲ್ಲಿ ವಿಭಿನ್ನ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದಾರೆ.

'ಒಂದು ರಾಷ್ಟ್ರ' ಎಂಬ ಕಲ್ಪನೆಯು ಭಾರತದಂತಹ ಜಾತ್ಯತೀತ ದೇಶದಲ್ಲಿ ಜಾರಿಗೆ ತರಲು ಸಾಧ್ಯವಿಲ್ಲ, ಏಕೆಂದರೆ ಭಾರತವು ವೈವಿಧ್ಯತೆಯ ರಾಷ್ಟ್ರವಾಗಿದ್ದು, ಬಹುಸಂಸ್ಕೃತಿಗಳು ನೆಲೆಗೊಂಡಿರುವ ಈ ದೇಶದಲ್ಲಿ ವಿವಿಧ ಜಾತಿ, ಧರ್ಮ, ಜನಾಂಗ, ಪಂಥ, ಬುಡಕಟ್ಟು ಸಮುದಾಯಗಳನ್ನು ಒಳಗೊಂಡು ಒಂದು ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ರಾಷ್ಟ್ರವಾಗಿದೆ. ಇಲ್ಲಿ ವಿವಿಧ ಸಂಸ್ಕೃತಿ, ಭಾಷೆಗಳಿರುವುದರಿಂದ ಒಂದು ದೇಶ–ಒಂದು ಸಂಸ್ಕೃತಿ, ಒಂದು ದೇಶ–ಒಂದು ಭಾಷೆ, ಒಂದು ದೇಶ–ಒಂದು ಕಾರ್ಡು, ಒಂದು ದೇಶ–ಒಂದು ತೆರಿಗೆ, ಒಂದು ದೇಶ–ಒಂದು ಕಾನೂನು, ಒಂದು ದೇಶ–ಒಬ್ಬ ವಿದ್ಯಾರ್ಥಿ, ಒಂದು ದೇಶ–ಒಂದೇ ಪಕ್ಷ, ಒಂದು ದೇಶ–ಒಬ್ಬ ನಾಯಕ ಎಂಬ ಕಲ್ಪನೆಯನ್ನು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ. ಏಕೆಂದರೆ, ಈಗಾಗಲೇ ಸ್ವತಂತ್ರ, ಸ್ವಾಯತ್ತ ಸಾಂವಿಧಾನಿಕ ಸಂಸ್ಥೆಗಳಾದ ಸರ್ವೋಚ್ಚ ನ್ಯಾಯಾಲಯ, ಭಾರತೀಯ ರಿಸರ್ವ್‌ಬ್ಯಾಂಕು, ಕೇಂದ್ರೀಯ ತನಿಖಾದಳ, ಜಾರಿ ನಿದೇಶನಾಲಯ, ಚುನಾವಣಾ ಆಯೋಗ, ಕೇಂದ್ರ ವಿಕ್ಷಣಾ ಆಯೋಗ ಮುಂತಾದ ಸಂಸ್ಥೆಗಳು ಸಂವಿಧಾನದ ಆಶಯವನ್ನು ಮರೆತು ತಮ್ಮ ಮೂಲಪಥದಿಂದ ದೂರಸರಿಯುತ್ತಿರುವುದನ್ನು ಕಂಡಾಗ ಇಂಥ ಆತಂಕ, ಅನುಮಾನಗಳಿಗೆ ಕಾರಣವಾಗುವುದಿಲ್ಲವೇ? ಅಷ್ಟೇ ಅಲ್ಲ ಇದನ್ನು ಪುಷ್ಟೀಕರಿಸುವಂತೆ, ಇತ್ತಿಚಿನ ವರ್ಷಗಳಲ್ಲಿ ನಡೆದ ಚುನಾವಣೆಗಳು ಬಹುತೇಕ ಭಾವನಾತ್ಮಕ ಅಂಶಗಳ ಮೇಲೆಯೇ ನಡೆದಿರುವುದನ್ನು ಗಮನಿಸಬಹುದು. ಹೀಗಿರುವಾಗ ಈ ಎಲ್ಲಾ ಅನುಮಾನ, ಆತಂಕಗಳಿಗೆ ಸೂಕ್ತ ಸಮಜಾಯಿಷಿ ಉತ್ತರ ಬೇಕಿದೆ.

ಆದರೆ 'ಒಂದು ಚುನಾವಣೆ' ಎಂಬ ಕಲ್ಪನೆಯನ್ನು ನೋಡುವುದಾದರೆ, ಸಹಜವಾಗಿ ಪದೇ ಪದೇ ಚುನಾವಣೆಗಿಂತ ಸ್ಥಿರ ಸರ್ಕಾರ ಉತ್ತಮವಾಗಿ ಕಂಡರೂ ಕೂಡ ಇದನ್ನು ಜಾರಿಗೆ ತರಲು ರಾಜಕೀಯ ಒಮ್ಮತದ ಅಭಿಪ್ರಾಯಬೇಕು. ಇಲ್ಲದಿದ್ದರೆ ಸಂವಿಧಾನಕ್ಕೆ ಅಗತ್ಯವಾದ ತಿದ್ದುಪಡಿಗಳನ್ನು ಮಾಡಲು ಸಾಧ್ಯವಾಗುವುದಿಲ್ಲ, ಏಕೆಂದರೆ ಇದಕ್ಕೆ ಮೂರನೇ ಎರಡರಷ್ಟು ಬಹುಮತ ಬೇಕಾಗುತ್ತದೆ. ಆದ್ದರಿಂದ ಇದನ್ನು ಒಮ್ಮತವಿಲ್ಲದೇ ಜಾರಿಗೆ ತರಲು ಸಾಧ್ಯವಿಲ್ಲ. ಲೋಕಸಭೆ, ರಾಜ್ಯ ವಿಧಾನಸಭೆಗಳು, ಪುರಸಭೆಗಳು ಮತ್ತು ಪಂಚಾಯತ್‌ಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವ ಸಾಧ್ಯತೆಯನ್ನು ಪರಿಶೀಲಿಸಲು ಕೇಂದ್ರ ಸರ್ಕಾರವು ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿದೆ. ಈ ಸಮಿತಿಯ ವರದಿ ಅನ್ವಯ ಕೇಂದ್ರ ಸರ್ಕಾರವು ಯಾವ ನಿರ್ಧಾರ ಕೈಗೊಳ್ಳುತ್ತದೆ ಎಂಬುದನ್ನು ಕಾದುನೋಡಬೇಕಿದೆ.

**ಪರಾಮರ್ಶನ ಗ್ರಂಥಗಳು**


- ಅಮಿತ್ ಎಂ.ಎಸ್. (2023,ಮೇ 10). ಒನ್ ನ್ಯಾಷನ್ ಒನ್ ಎಲೆಕ್ಷನ್ ದೇಶಕ್ಕೆ ಲಾಭವೇ? ಇದರ ಸಾಧಕ–ಬಾಧಕಗಳೇನು?. ವಿಜಯ ಕರ್ನಾಟಕ ದಿನಪತ್ರಿಕೆ.
- ಚಿಂತನ್ ರಾ. (2023, ಸೆಪ್ಟೆಂಬರ್ 2). ಒನ್ ನ್ಯಾಷನ್ ಒನ್ ಎಲೆಕ್ಷನ್. ಎಥಿಕಲ್ ಜರ್ನಲಿಸಂ.

  https://www.youtube.com/watch?v=-m0-1pVvpbI
- ಒಂದು ದೇಶ, ಒಂದೇ ಚುನಾವಣೆ. (2019, ಜೂನ್ 17). ವಿಜಯ ಕರ್ನಾಟಕ ದಿನಪತ್ರಿಕೆ.
- ಶಂಕರ್ ಬಿ.ಎಲ್. (2023). ಒಂದು ದೇಶ ಒಂದು ಚುನಾವಣೆ: ಸಾಧ್ಯಾ ಸಾಧ್ಯತೆಗಳು. *ಸಂವಾದ* 21(12).18.
- ಉಮೇಶ್‌ಕುಮಾರ್ ಎಸ್. (2023, ಡಿಸೆಂಬರ್ 22). *ಒಂದು ದೇಶ ಒಂದು ಚುನಾವಣೆ ಕುರಿತಾದ ತಾರ್ಕಿಕ ಸಂದೇಹಗಳು ಮತ್ತು ಇತರೆ ಪ್ರಶ್ನೆಗಳಿಗೆ ಇಲ್ಲಿದೆ ಉತ್ತರ. ಕನ್ನಡ ಹಿಂದೂಸ್ತಾನ್ ಟೈಮ್ಸ್.*

- ವಿರೋಧ ಪಕ್ಷಗಳ ಜೊತೆ, ರಾಜ್ಯಗಳ ಜೊತೆ ಸಮಾಲೋಚನೆಯನ್ನು ಮಾಡದೆ ಸಮಿತಿ ಘೋಷಿಸಿದ್ದೇಕೆ?. (2023, ಸೆಪ್ಟೆಂಬರ್ 6). ವಾರ್ತಾಭಾರತಿ ದಿನ ಪತ್ರಿಕೆ.
- Basu D D. (2015). Introduction to the constitution of India. (26th edition). LexisNexis.
- Jagran Josh. (2024, March 15). *What is One Nation, One Election? Understanding the Working of the Proposal*. Jagranjosh.com. https://www.jagranjosh.com/general-knowledge/what-is-one-nation-one-election-understanding-the-working-of-the-proposal-1710452768-1
- *Law Commission of India* (n.d.). https://lawcommissionofindia.nic.in/
- *One Nation One Election: Constitutional challenges*. (n.d.). https://www.legalserviceindia.com/legal/article-1763-one-nation-one-election-constitutional-challenges.html
- *Online IAS test series & study material*. (n.d.). https://www.drishtiias.com.
- Sandeep. (2022). One Nation-One Election: Possibilities and challenges in India. In International Journal for Research Trends and Innovation, *International Journal for Research Trends and Innovation* (Vol. 7, Issue 12, pp. 531–532) [Journal-article]. https://www.ijrti.org/papers/IJRTI2212078.pdf